ಪ್ರತಿಭಾವಂತ ಪ.ಜಾತಿ ಮತ್ತು ಪ.ವರ್ಗದ ವಿದ್ಯಾರ್ಥಿಗಳಿಗ ಒಂದು ಮತ ಎರಡನೇ ದರ್ಜೆಗಳಿಗೆ ನೇರ ನೇಮಕಾತಿ

197- ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಮುಖ್ಯಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿ ಒಂದು ಮತ್ತು ಎರಡನೇ ದರ್ಜೆಗೆ ನೇರ ನೇಮಕಾತಿ 1982 - 198 ನೇ ಸಾಲಿನಲ್ಲಿ ಮಾಡಿ ನಂತರದ ವರ್ಷಗಳಲ್ಲಿ ನೇರ ನೇಮಕಾ ಮಾಡದಿರುವುದು ನಿಜವೇ?

ಆ) 1983 - 84ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 4(ಜನ ಅಭ್ಯರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆ ನೌಕರರಿ ಸಂದರ್ಶನ ನಡೆಸಿದ ನಂತರ ಫಲಿತಾಂಶ ಪ್ರಕಟವಾಗುವ ಮುನ್ನ ಸಾರ್ವಜನಿ ಸೇವಾ ಆಯೋಗಕ್ಕೆ ವಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ?

ಇ) ಸರ್ಕಾರ ನೀತಿಗನುಗುಣವಾಗಿ ಮೇಲ್ಕಂಡ ಜನಾಂಗದ ಪ್ರತಿಭಾವಂತರಿ 1983-1984ನೇ ವರ್ಷದಿಂದ ಈ ವರ್ಷದವರೆಗೆ ಒಂದು ಮತ್ತು ಎರಡನೆ ದರ್ಜೆ ನೌಕರಿ ಕೊಡಲು ಸರ್ಕಾರದ ನಿಲುವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) 1983-84ನೇ ಸಾಲಿನ ಆಯ್ಕೆ ಮಾಡಲಾಗಿದೆ. ಆ ನಂತರದ ವರ್ಷಗಳ ನೇಮಕಾತಿಗಾಗಿ ರಿಕ್ತಸ್ಥಾನಗಳ ಬಗ್ಗೆ ಮಾಹಿತಿ ಕೋರಿ ಎಲ್ಲಾ ಇಲಾಖೆಗಳಿಗೂ ಪತ್ರ ಬರೆದಿದೆ.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿಶೇಷ ನೇಮಕಾತಿ ಕರ್ನಾಟಕ ಲೋಕ ಸೇವಾ ಆಯೋಗದ ಪರಿಮಿತಿಯಲ್ಲಿ ಬರುವುದಿಲ್ಲ ಹಾಗೂ 1983-84 ನೇ ಸಾಲಿನ ಆಯ್ಕೆಯು ತಿದ್ದುಪಡಿ ನಿಯಮಗಳನ್ವಯ ಮೌಖಿಕ ಪರೀಕ್ಷೆ ಇಲ್ಲದೆ ಅಭ್ಯರ್ಥಿಗಳನ್ನು ಅವರ ಅರ್ಹತೆ ಆಧಾರದ ಮೇಲೆ ಸರ್ಕಾರದ ಮತಿಯಿಂದ ನೇಮಕಾತಿ ಮಾಡಲಾಗಿದೆ.

ಇ) 1983-84ನೇ ಸಾಲಿನ ಆಯ್ಕೆ ಮಾಡಿದೆ. 1984-85ರಿಂದೀಚಿನ ಆಯ್ಕೆ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೇಲೂರು ಮತ್ತು ಹಳೇಬೀಡುಗಳಿಗೆ ಪೊಲೀಸ್ ಠಾಣೆ

200 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಮತ್ತು ಹಳೇಬೀಡುಗಳಿಗೆ ಪ್ರವಾಸಿಗಳ ಒತ್ತಡ ಹೆಚ್ಚಾಗಿರುವುದರಿಂದ ಹಳೇಬಿಡು ಮಾದಿಹಳ್ಳಿ ಹೋಬಳಿಗಳನ್ನು ಸೇರಿಸಿ ಹಳೇಬೀಡಿಗೆ ಸಬ್‌ಇನ್ಸ್‌ಪೆಕ್ಟರ್ ಹೊಂದಿರುವ ಪೊಲೀಸ್ ಠಾಣೆ ಕೊಡುವುದಾಗಿ ಎರಡು ವರ್ಷಗಳ ಹಿಂದೆ ಆಗಿನ ಗೃಹ ಸಚಿವರು ಈ ಸಭೆಯ ಆಯವ್ಯಯ ಅಂದಾಜು ಚರ್ಚೆ ವೇಳೆಯಲ್ಲಿ ಆಶ್ವಾಸನೆ ಕೊಟ್ಟಿದ್ದು ಈವರೆಗೆ ಆಗದಿರಲು ಕಾರಣವೇನು?

ಆ) ಆಶ್ವಾಸನೆ ಈಡೇರುವುದು ಯಾವಾಗ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :